

ಈಡಾಗಬೇಕು ಎಂದು ಅನಿಸುತ್ತಿತ್ತು. ಓದು ಅರ್ಧಕ್ಕೆ ನಿಲ್ಲಿಸಿ ಬೆಂಗಳೂರಿಗೆ ದುಡಿಯಲು ಹೋದ ಊರಿನ ರೈತರ ಮಕ್ಕಳು ಹಿಂದಿರುಗಿದಾಗ ಹೀಗೆ ಮಾತನಾಡುತ್ತಿದ್ದರು...

'ದೋಸ್ತ ನಮಗ ಬೆಂಗಳೂರಿನ ಊಟಾನ ಹಿಡ್ಸಂಗಿಲ್ಲ. ಮಧ್ಯಾಹ್ನ ಊಟಕ್ಕ ಎರಡು ಕತ್ತೆ ಬಾಳೆಹಣ್ಣು ತಿಂದ್ರ ಹೊಟ್ಟೆ ತುಂಬಿ ಹೊಕ್ಕೇತಿ. ಅಷ್ಟು ದಪ್ಪ ಇರ್ತಾವು ಬೆಂಗಳೂರಿನ ಬಾಳೆಹಣ್ಣು. ಇನ್ನೂ ರಾತ್ರಿಗೆ ಮೆಜೆಸ್ಟಿಕ್‌ನ್ಯಾಗ ಹದಿನೈದು ರೂಪಾಯ್ಗ ಬಿರಿಯಾನಿ ಕೊಡ್ತಾರ. ಮುಗೀತು. ನಾವು ಯಾವತ್ತೂ ಖಾನಾವಳಿಗೆ ಹೋಗಂಗಿಲ್ಲ...' ಹೀಗೆ ಮಾತುಗಳು ಬೆಂಗಳೂರಿನ ಒಂದು ಹೇಯ ಬದುಕನ್ನು ವರ್ಣಿಸುತ್ತಿದ್ದವು. ಇದು ಹಸಿವಿನ ದಾರುಣತೆಯೋ, ಲೇವಡಿಯೋ... ಎರಡು ಹಸಿ ಹಿಟ್ಟಿನ ಮಿರ್ಚಿ, ಎರಡು